ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಜುಲೈ 16, 2020**

# ಪತ್ರಿಕಾ ಆಮಂತ್ರಣ

# ಪತ್ರಿಕಾ ಪ್ರಕಟಣೆ

**ಚಿತ್ರಸುದ್ದಿ**

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ): ಕೋವಿಡ್ – 19 ಹಿನ್ನಲೆಯಲ್ಲಿ ಲಾಕ್‌ಡೌನ್ ಇರುವ ಈ ಸಂದರ್ಭದಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಹಾಗೂ ಆಸ್ಪತ್ರೆಗಳ ಆವರಣದಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿ ರೋಗ ನಿರೋಧಕ ಔಷಧಿಯನ್ನು ಸಿಂಪಡಣೆ ಮಾಡಿದರು. ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆದ ಕಾರ್ಯಕರಮದಲ್ಲಿ ಅಗ್ನಿಶಾಮಕ ದಳದ ಎಡಿಜಿಪಿ ಸುನಿಲ್ ಅಗರ್‌ವಾಲ್ ಅವರು ಚಾಲನೆ ನೀಡಿದರು.

ಛಾಯಾಚಿತ್ರ ಲಗತ್ತಿಸಿದೆ.)

## “ರಂಗಯಾತ್ರೆ ಮುಗಿಸಿದ ನಾಡೋಜ ಸುಭದ್ರಮ್ಮ’’

ಬೆಂಗಳೂರು, ಜುಲೈ 16 (ಕರ್ನಾಟಕ ವಾರ್ತೆ): ರಂಗ ಸಂಗೀತದಲ್ಲಿ ದೊಡ್ಡ ಹೆಸರು ಮಾಡಿದ್ದ ಹಿರಿಯ ರಂಗ ಕಲಾವಿದೆ ನಾಡೋಜ ಶ್ರೀಮತಿ ಸುಭದ್ರಮ್ಮ ಮನ್ಸೂರ್ (81) ಅವರು ತಮ್ಮ ರಂಗಯಾತ್ರೆಯನ್ನು ಮುಗಿಸಿರುವುದು ಅತ್ಯಂತ ನೋವು ತಂದಿದೆ ಎಂದು ರಂಗಕರ್ಮಿ, ಕನ್ನಡ ಅಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್.ನಾಗಾಭರಣ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಕಳೆದ 50 ವರ್ಷಗಳಿಂದ ರಂಗಭೂಮಿಯಲ್ಲಿ ತೊಡಗಿಸಿಕೊಂಡು ದೊಡ್ಡ ಮಟ್ಟದ ಹೆಸರು ಮತ್ತು ಅಭಿಮಾನಿಗಳನ್ನು ಗಳಿಸಿಕೊಳ್ಳುವ ಮೂಲಕ ರಂಗಭೂಮಿಯಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದ, ಬಳ್ಳಾರಿ ಸುಭದ್ರಮ್ಮ ಎಂದೇ ಖ್ಯಾತರಾಗಿದ್ದ ಇವರು 27ನೇ ವಯಸ್ಸಿಗೆ ರಂಗ ಪ್ರವೇಶ ಮಾಡಿದ್ದ ಸುಭದ್ರಮ್ಮ

ಅವರು ಪಾತ್ರಗಳಿಗೆ ಜೀವ ತುಂಬುತ್ತಿದ್ದರು. ಹಾಗಾಗಿಯೇ ಇವರಿಗೆ ಪೌರಾಣಿಕ ಕಥೆಗಳಲ್ಲಿ ಬರುವ ಕುಂತಿ, ದ್ರೌಪದಿ, ಸೀತೆ, ಗಾಂಧಾರಿ ಮುಂತಾದ ಪಾತ್ರಗಳೇ ಇವರನ್ನು ಅರಸಿ ಬರುತ್ತಿದ್ದವು. ಕಂಚಿನ ಕಂಠ ಹೊಂದಿದ್ದ ಸುಭದ್ರಮ್ಮ ಅವರು ಜೀವನದಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡುಂಡವರು. ಧಾರವಾಡ ಆಕಾಶವಾಣಿಯ ಉನ್ನತ ಶ್ರೇಣಿಯ ಕಲಾವಿದೆಯಾಗಿದ್ದ ಸುಭದ್ರಮ್ಮ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಗುಬ್ಬಿ ವೀರಣ್ಣ ಪ್ರಶಸ್ತಿಯ ಜೊತೆಗೆ ಹಂಪಿ ವಿಶ್ವವಿದ್ಯಾಲಯ ನೀಡುವ ನಾಡೋಜ ಗರಿ ಗಳಿಸಿಕೊಂಡಿದ್ದರು. ಇಂಥ ಪ್ರತಿಭಾನ್ವಿತ ಹಿರಿಯ ಕಲಾವಿದೆ ಸುಭದ್ರಮ್ಮ ಅವರು ತಮ್ಮ ರಂಗಯಾತ್ರೆ ಮುಗಿಸಿರುವುದು ಅತ್ಯಂತ ನೋವಿನ ಸಂಗತಿ ಎಂದು ನಾಗಾಭರಣ ಅವರು ಅತೀವ ದುಃಖ ವ್ಯಕ್ತಪಡಿಸಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.